Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸುಗೂರು.

ಸಿ.ಸಿ.ನಂ. 714/2023

ಸಿ.ಡಬ್ಲೂ-08

ಪಿ.ಡಬ್ಲೂ-06

ಸಾಕ್ಷಿದಾರರ ಹೆಸರು :- ಶಾಂತಮ್ಮ

ಗಂಡನ ಹೆಸರು :- ಸೋಮಲೆಪ್ಪ

ವಯಸ್ಸು :- 60 ವರ್ಷ

ಉದ್ಯೋಗ :- ಕೂಲಿ ಕೆಲಸ

ವಾಸಸ್ಥಳ :- ಹಾಲಭಾವಿ ತಾಂಡ

ದಿನಾಂಕ 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ಚಾ.ಸಾ-1 ನನ್ನ ಮಗಳು. ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-4 ಮತ್ತು 5 ನನ್ನ ಮಕ್ಕಳು. ಚಾ.ಸಾ-6 ನನ್ನ ಮೊಮ್ಮಗಳು. ಚಾ.ಸಾ-7 ನನ್ನ ಮೈದುನ. 1ನೇ ಆರೋಪಿ ನನ್ನ ತಮ್ಮ. 2ನೇ ಆರೋಪಿ ಮೃತಪಟ್ಟಿರುತ್ತಾನೆ. 3ನೇ ಆರೋಪಿ ನನ್ನ ತಮ್ಮ. 4 ರಿಂದ 11 ನೇ ಆರೋಪಿತರು ನಮ್ಮ ಸಂಬಂಧಿಕರು.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 8-00 ಗಂಟೆಗೆ ನಾನು ಚಾ.ಸಾ-1 ರವರ ಮನೆಯ ಮುಂದೆ ಇರುವಾಗ ಚಾ.ಸಾ-1 ರವರು ತನ್ನ ಗಂಡನಿಗೆ ಬರಬೇಕಾದ ಆಸ್ತಿಯನ್ನು ಕೊಡಬೇಕು ಎಂದು ಹಿರಿಯರಿಗೆ ಕರೆಯಬೇಕು ಎಂದು ಅವರ ಮನೆಯ ಮುಂದೆ ಇದ್ದಾಗ ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಚಾ.ಸಾ-1 ರವರಿಗೆ ಬೋಸೂಡಿ, ಸೂಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ನಂತರ ಚಾ.ಸಾ-1 ರವರಿಗೆ ಲೇ ನಿನಗೆ ಬಾಗ ಕೊಡುವದಿಲ್ಲ ಎಲ್ಲಿಗೆ ಹೋಗುತ್ತಿಯಾ ಹೋಗು ಎಂದು ಜೀವ ಬೆದರಿಕೆ ಹಾಕಿರುತ್ತಾರೆ. 1ನೇ ಆರೋಪಿ ಬೈದು ಕಬ್ಬಿಣದ ರಾಡಿನಿಂದ ಚಾ.ಸಾ-1 ರವರ ಹೊಟ್ಟೆಯ ಭಾಗಕ್ಕೆ ಹೊಡೆದಿರುತ್ತಾನೆ. ನಂತರ 1ನೇ ಆರೋಪಿ

ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿ ಮಾನಬಂಗ ಮಾಡಿರುತ್ತಾನೆ. ನಂತರ 3, 5, 6 ಮತ್ತು 11ನೇ ಆರೋಪಿರು ಬಂದು ಚಾಸಾ-1 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ. ಆಗ ಚಾ.ಸಾ-4 ಮತ್ತು 5 ರವರು ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ಚಾ.ಸಾ-5 ರವರಿಗೆ ಕೈ ಮುಷ್ಠಿ ಮಾಡಿ ಎದೆಯ ಬಾಗಕ್ಕೆ ಹೊಡೆದಿರುತ್ತಾನೆ. ಅದೇ ರೀತಿ ಚಾ.ಸಾ-4 ರವರಿಗೆ 5ನೇ ಆರೋಪಿ ಕಟ್ಟಿಗೆಯಿಂದ ಹೊಡೆದಿರುತ್ತಾನೆ. ಚಾ.ಸಾ-6 ರವರು ಜಗಳ ಬಿಡಿಸಿರುತ್ತಾರೆ. ನಂತರ ಚಾ.ಸಾ-6 ರವರಿಗೆ ಎಲ್ಲಾ ಆರೋಪಿತರು ಕೈಗಳಿಂದ ಹೊಡೆದಿರುತ್ತಾರೆ. ನಾನು ಮತ್ತು ಚಾ.ಸಾ-7 ರವರು ಜಗಳ ಬಿಡಿಸಿರುತ್ತೇವೆ. ನಂತರ ಕೇಸು ಮಾಡಿರುತ್ತಾರೆ. ಕಟ್ಟಿಗೆ ಮತ್ತು ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು ಶ್ರೀ ಎಸ್.ಆರ್.ಆರ್ ವಕೀಲರಿಂದ : -</u>**

ಮುದ್ದೇಮಾಲು-1 ಮತ್ತು 2 ಗಳನ್ನು ಇವತ್ತೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವಾದ ಮೇಲೆ ನಾನು ಬಿಡಿಸಲು ಬಂದಿರುತ್ತೇನೆ. ಜಗಳ ನಾವು ಬರುವದಕ್ಕಿಂತ ಮುಂಚೆ ಆಗಿತ್ತು ಎಂದರೆ ಸರಿ. ಚಾ.ಸಾ-1 ರವರ ಗಂಡ ತೀರಿಕೊಂಡಿರುತ್ತಾನೆ. ಆತನು ಮದುವೆಯಾಗುವದಕ್ಕಿಂತ ಮುಂಚೆ ಬೇರೆಯಾಗಿದ್ದ ಎಂದರೆ ಸರಿಯಲ್ಲ. ನಮ್ಮ ಚಾ.ಸಾ-1 ರವರ ಗಂಡನ ಹೊಲದಲ್ಲಿ ಭಾಗ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. 1ನೇ ಆರೋಪಿತನು ಅವರು ಬೇರೆಯಾದ ನಂತರ 4 ಎಕರೆ ಜಮೀನನ್ನು ತನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದ ಎಂದರೆ ಸರಿ. ಚಾ.ಸಾ-1 ರವರು ಜಮೀನಿನಲ್ಲಿ ಬಾಗ ಬೇಕು ಎಂದು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಕೇಸು ಹಾಕಿರುತ್ತಾಳೆ ಎಂದರೆ ಸರಿ. ಆ ಆಸ್ತಿಯಲ್ಲಿ ಚಾ.ಸಾ-1 ರವರಿಗೆ ಯಾವುದೇ ಬರದಿದ್ದರೂ ಸಹ ಆರೋಪಿತರ ಜೊತೆ ಜಗಳ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಈಗಾಗಲೇ ಚಾ.ಸಾ-1 ರವರಿಗೆ 2 ಎಕರೆ ಜಮೀನು ಕೊಟ್ಟಿದ್ದು ಅದನ್ನು ಉಳುಮೆ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಆ ದ್ವೇಷದಿಂದ ಚಾ.ಸಾ-1 ರವರು ಆರೋಪಿತರ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾ.ಸಾ-1, 4 ಮತ್ತು 5 ರವರಿಗೆ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯಲ್ಲಿ ಈ ವಿಷಯಗಳನ್ನು ಹೇಳಿರುತ್ತೇನೆ. ಆರೋಪಿತರು ಯಾವುದೇ ಕಟ್ಟಿಗೆಯಿಂದ, ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿಲ್ಲ ಅವಾಚ್ಯವಾಗಿ ಬೈದಿಲ್ಲ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಚಾ.ಸಾ-1 ರವರ ಸೀರೆ ಹಿಡಿದು ಎಳೆದಾಡಿ ಮಾನಬಂಗ ಮಾಡಿಲ್ಲ ಎಂದೆರ ಸರಿಯಲ್ಲ.

ಚಾ.ಸಾ-6 ರವರಿಗೆ ಕೈಗಳಿಂದ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಜಗಳವನ್ನು ನೋಡಿ ಬಿಡಿಸಿಲ್ಲ ಎಂದರೆ ಸರಿಯಲ್ಲ. ಚಾ.ಸಾ-1 ರವರು ನನ್ನ ಮಗಳಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.